



## ಕ್ಲಾಸಿಕ್ ಮತ್ತು ಡೈಲಿವೇರ್

ದಿನನಿತ್ಯ ಕಚೇರಿಗೆ ಹೋಗುವ ಮಹಿಳೆಯರಿಗೆ ಸಿಂಪಲ್ ಹಾಗೂ ಹಗುರವಾಗಿರುವ ಒಡವೆಗಳೇ ಬೇಕು. ಚಿನ್ನ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ಕಳ್ಳಕಾಕರ ಭಯವೂ ಕಾಡದಿರದು. ಕೃತಕ ಆಭರಣಗಳು ತರಾವರಿ ವಿನ್ಯಾಸಗಳಲ್ಲಿ ಲಭ್ಯವಿದ್ದರೂ ಚಿನ್ನದ ಆಭರಣ ತೊಟ್ಟುಕೊಂಡಷ್ಟು ಸಂತೃಪ್ತಿ ಸಿಗುವುದಿಲ್ಲ. ಹೀಗಾಗಿ ಸೆಲೆಬ್ರಿಟಿಗಳು, ವೈದ್ಯರು, ಸಾಫ್ಟ್‌ವೇರ್ ಎಂಜಿನಿಯರರು, ಉದ್ಯಮಶೀಲತಾ ಮಹಿಳೆಯರು ಕ್ಲಾಸಿಕ್ ಮತ್ತು ಡೈಲಿವೇರ್ ಆಭರಣಗಳನ್ನೇ ಬಯಸುತ್ತಾರೆ. ಇದರಲ್ಲಿ ಆ್ಯಂಟಿಕ್, ಸಮಕಾಲೀನ, ಆಧುನಿಕ ಒಡವೆಗಳಿರುವುದರಿಂದ ಎಲ್ಲ ವರ್ಗದ ಮಹಿಳೆಯರನ್ನೂ ಸೆಳೆಯುತ್ತವೆ.

ಮಾಡಿರುವುದು ಒಡವೆ ಮಾರುಕಟ್ಟೆಯಲ್ಲಿ ಹೆಚ್ಚುಕಾಲ ಸ್ಥಿರವಾಗಿ ಉಳಿಯುವಂತೆಯೂ ಮಾಡಿದೆ.

### ಪೆಂಡೆಂಟ್‌ನಲ್ಲಿ ಆನೆ

ಕೆಲವೊಂದು ಆಭರಣ ಕಂಪೆನಿಗಳು ವನ್ಯಜೀವಿಗಳ ರಕ್ಷಣೆಗೆ ಮುಂದಾಗಿದೆ. ಆಭರಣದ ಮೂಲಕ ಆನೆಯ ಸಂತತಿ ಉಳಿವಿನ ಜಾಗೃತಿ ಮೂಡಿಸುತ್ತಿದೆ. ಕೆಲವರ್ಷಗಳ ಹಿಂದೆ 'ಆಭರಣ ಜ್ಯುವೆಲ್ಲರಿ' ಆನೆಯ ಉಳಿವಿನ ಆಂದೋಲನವನ್ನೇ ಮಾಡಿತ್ತು. ಇದಕ್ಕಾಗಿ ಒಡವೆಗಳಲ್ಲಿ ಆನೆಯ ಚಿತ್ರವನ್ನು ಚಿತ್ರಿಸಿತ್ತು. ಆನೆಯ ಪ್ರತಿರೂಪದ ಪೆಂಡೆಂಟ್, ಉಂಗುರ, ನೆಕ್ಲೇಸ್ ಜನಪ್ರಿಯವೂ ಆಗಿದೆ.

ಆಭರಣಗಳಲ್ಲಿ ದೇವಾನುದೇವತೆಗಳನ್ನು ಚಿತ್ರಿಸಿ ಅದನ್ನು ಧರಿಸಿಕೊಳ್ಳುವುದುಕೂಡ ಟ್ರೆಂಡ್ ಸೃಷ್ಟಿಸಿದೆ. ಹೀಗಾಗಿ ಪರಂಪರೆಯ ಆಭರಣ ಮತ್ತೆ ಫ್ಯಾಷನ್ ಹಾದಿ ಹಿಡಿದಿದೆ. ಸಾಂಪ್ರದಾಯಿಕ ಒಡವೆಗಳು ಆಧುನಿಕ ಸ್ಪರ್ಶದೊಂದಿಗೆ ಮತ್ತೆ ಫ್ಯಾಷನ್ ಜಗತ್ತಿಗೆ ಎಡತಾಕಿದೆ.

'ಕರಕೌಶಲ್ಯ ಮತ್ತು ಪರಿಪಕ್ವತೆ ಇರುವ ಮತ್ತು ಸೂಕ್ಷ್ಮದೃಷ್ಟಿಯನ್ನು ಹೊಂದಿರುವ ನುರಿತ ಕೆಲಸಗಾರರಿಂದ ಆಭರಣಗಳನ್ನು ವಿನ್ಯಾಸಗೊಳಿಸಿ ಗ್ರಾಹಕರಿಗೆ ಒದಗಿಸುತ್ತೇವೆ. ಹೀಗಾಗಿ ಮಹಿಳೆಯರಲ್ಲಿ ಒಡವೆ ಖರೀದಿಯಲ್ಲೂ ಸ್ಪರ್ಧಾತ್ಮಕ ಮನೋಭಾವನೆ ಮೂಡುತ್ತದೆ. ಉಂಗುರ, ಬಳೆ, ಬ್ರೇಸ್‌ಲೆಟ್, ನೆಕ್ಲೇಸ್‌ಗಳಿಗೆ ಬಹಳ ಬೇಡಿಕೆ ಬರುತ್ತಿದೆ.ಇಇಇ ಹೆಚ್ಚಾಗಿ ಮದುವೆ ಸಂದರ್ಭದಲ್ಲಿ ಇಂಥ ವಿಶೇಷ ಆಭರಣಗಳನ್ನು ಜನ ಬಯಸುತ್ತಾರೆ' ಎಂದು ಹೇಳುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಒಡವೆ ವರ್ತಕ ಪವನ್ ಚಂದನ್‌ಲಾಲ್.

'ಆಭರಣಗಳಲ್ಲಿ ಆದಷ್ಟು ಸಿಂಪಲ್ ಆಗಿರುವುದೇ ಮಹಿಳೆಯರು ಬಯಸುತ್ತಾರೆ. ಸಿಂಪಲ್ ಆಗಿರುವ ರಿಂಗ್, ನೆಕ್ಲೇಸ್ ಆಕರ್ಷಕ ಲುಕ್ ಕೊಡುತ್ತದೆ. ನೂರಾರು ವರ್ಷ ಇತಿಹಾಸವಿರುವ ಆಭರಣಗಳು ಇಂದಿಗೂ ಜನಪ್ರಿಯತೆ ಕಳೆದುಕೊಂಡಿಲ್ಲ. ಹೀಗಾಗಿ ಸಾಂಪ್ರದಾಯಿಕ ಒಡವೆಗಳಿಗೆ ಆಧುನಿಕ ಟಚ್ ಕೊಡುವ ಪ್ರಯತ್ನವನ್ನೂ ಮಾಡಿದ್ದೇವೆ' ಎನ್ನುತ್ತಾರೆ ಪವನ್.

ಚಿನ್ನ ಬೆಳ್ಳಿ ಮೇಲೆ ಮುತ್ತು, ಪಚ್ಚೆ, ನೀಲ, ಹವಳಗಳನ್ನು ಕೂರಿಸಿ ಹೊಸ ಪರಿಕಲ್ಪನೆಯೊಂದಿಗೆ ಮಾಡಿದ ಆಭರಣ ಸಾಂಪ್ರದಾಯಿಕತೆಗೆ ಆಧುನಿಕ ಮೆರುಗು ನೀಡಿದಂತೆ ಕಾಣುತ್ತದೆ. ಕೈಕುಸುರಿಯಿಂದ ಮಾಡಿದ ಒಡವೆಯಲ್ಲಿ ವಿನ್ಯಾಸಗಾರನ ಚಾಕಚಕ್ಯತೆಯ ಛಾಪು ಒತ್ತಿದೆ. ಇಲ್ಲೂ ಮೂಲ ಆಭರಣ ವಿನ್ಯಾಸಕ್ಕೆ ಕೊಂಚವೂ ಧಕ್ಕೆಯಾಗದಂತೆ ತಯಾರಿಸಿದ ವಿನ್ಯಾಸಗಾರನ ಪರಿಶ್ರಮ ಒಡವೆಯನ್ನು ಮತ್ತಷ್ಟು ಆಕರ್ಷಕವಾಗಿಸುವಲ್ಲಿ ಸಫಲವಾಗಿದೆ.

ಇವೆಲ್ಲದರ ಮಧ್ಯೆ ಹಳೆಯ ಕಾಲದ ಕಂಠಿ ಹಾರ, ಕಿವಿ ಓಲೆಗಳು, ಬಳೆಗಳು, ಕಾಕ್‌ಟೇಲ್ ರಿಂಗ್‌ಗಳು, ಪ್ರಾಚೀನ ಬೆಳ್ಳಿ ವಸ್ತುಗಳು, ಸಣ್ಣ ಬೆಳ್ಳಿ ಹಣಿಗೆಗಳು ಮತ್ತು ಬೆಲೆಬಾಳುವ ಮಣಿಗಳಲ್ಲಿ ಕಟ್ಟಿರುವ ಚಿನ್ನದ ಒಡವೆಗಳೂ ಬಹುಬೇಡಿಕೆ ಗಳಿಸುತ್ತಿದೆ.

ಮನಮೋಹಕವಾದ ಪಾರಂಪರಿಕ ಆಭರಣ ಫ್ಯಾಷನ್ ಆಗಿ ಬಂದ ಲಾಗಾಯ್ತಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳುಕು ಹಾಕಿಕೊಂಡು ಮತ್ತಷ್ಟು ಆಕರ್ಷಕವಾಗಿ ಗ್ರಾಹಕರನ್ನು ತಲುಪಿಸಲು ಆಭರಣ ಮಳಿಗೆಗಳು ಮುಂದಾಗಿವೆ. ಇದರ ಜತೆಗೆ ಪ್ರಾಚೀನ ಆಭರಣಗಳು, ವಧುವಿನ ಅಲಂಕಾರ ಸಂಗ್ರಹ, ನಿಜಾಮರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ.. ಹೀಗೆ ಆಭರಣಗಳ ತರಾವರಿ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ರಾಯಭಾರ ನಡೆಸುತ್ತಿದೆ.

ಎಥ್ನಿಕ್ ಆಭರಣ, ಆಮ್ರಪಾಲಿ ಒಡವೆ, ಸಿಂಪಲ್ ಆಗಿರುವ ಆ್ಯಂಟಿಕ್ ಒಡವೆಗಳು ಕೂಡ ಮಹಿಳೆಯರಿಗೆ ಆಯ್ಕೆಯನ್ನು ಒದಗಿಸಿ ಮನಗೆಲ್ಲುತ್ತಿದೆ. ಹೀಗೆ ಫ್ಯಾಷನ್ ಪ್ರಪಂಚದಲ್ಲಿ ಒಡವೆಗಳು ಮಹಿಳೆಯರ ಕಣ್ಣು ಕೋರೈಸಿ ತಮ್ಮ ತಿಜೋರಿಯಲ್ಲಿ ಆದಷ್ಟು ಸೇರಿಸಿಕೊಳ್ಳುವ ಬಯಕೆ ಹುಟ್ಟಿಸುತ್ತಿದೆ. ■